



# ಇಟ್ಟಿಗೆಯ ಕಾರು






ಸಾಮಾನ್ಯವಾಗಿ ಮನೆ, ಗೋಡೆಗಳನ್ನು ಕಟ್ಟಲು ಇಟ್ಟಿಗೆಗಳನ್ನು ಬಳಸುತ್ತಾರೆ. ಚೀನಾದ ಡ್ರೈ ಗೆಂಗ್ ಎಂಬ ವ್ಯಕ್ತಿ ಇಟ್ಟಿಗೆಗಳನ್ನು ಬಳಸಿ ಈ ಕಾರು ನಿರ್ಮಿಸಿದ್ದಾನೆ. ಗಂಟೆಗೆ 150 ಮೈಲು ವೇಗವಾಗಿ ಓಡುವ ಬಿ.ಎಂ.ಡಬ್ಲ್ಯು. ಎಂಬ ಸ್ಪೋರ್ಟ್ಸ್ ಕಾರಿನ ಪ್ರತಿರೂಪವಿದು. ಹಾಗೆಂದು ಇದು ಓಡುವುದಿಲ್ಲ. ನೋಡೋದಕ್ಕಷ್ಟೆ. ಆ ವೇಗದ ಕಾರಿನ ಮಾದರಿ ಮಾತ್ರ.

ಶ್ರೀಮಂತರ ಮನೆಯ ಮುಂದೆ ಷೋಕಿಗಾಗಿ ಇಡಬಹುದೋ ಏನೋ! ಅಷ್ಟಾಗಿಯೂ ಡ್ರೈ ಗೆಂಗ್‌ನ ಸೃಜನಶೀಲತೆಯನ್ನು ಮೆಚ್ಚಲೇಬೇಕು ಬಿಡಿ. ಈ ಕಾರಿನ ಪ್ರತಿ ಅಂಗವೂ ಇಟ್ಟಿಗೆಯಿಂದ ಮಾಡಲ್ಪಟ್ಟಿದೆ. ಮುಚ್ಚಿ ತೆಗೆಯುವ ಬಾಗಿಲು, ಗಾಲಿ, ಟೈರ್, ಸ್ಟೇರಿಂಗ್, ಎಕ್ಸಾಸ್ಟ್ ಪೈಪ್.. ಎಲ್ಲವೂ ಇಟ್ಟಿಗೆಯದೇ! ಕೇವಲ ಕಿಟಕಿಯ ಗಾಜು ಒರಿಜಿನಲ್!

5 ಮೀಟರ್ ಉದ್ದ, 2.15 ಮೀಟರ್ ಅಗಲ ಹಾಗೂ 1.6 ಮೀಟರ್ ಎತ್ತರದ ಈ ಕಾರಿನ ತೂಕ ಆರೂವರೆ ಟನ್. 2007ರಲ್ಲಿಯೇ ನಿರ್ಮಾಣವಾದ ಈ ಕಾರು ಹಲವಾರು ಕಡೆ ಪ್ರದರ್ಶಿತವಾಗಿದೆ. ಅಷ್ಟೇ ಅಲ್ಲ, ಮಾರಾಟಕ್ಕೂ ಇದೆ.

ಮನೆಯ ಮುಂದಿನ ಸುಂದರ ಕೈತೋಟದಲ್ಲಿ, ಇಂತಹದ್ದೊಂದು ಕಲಾತ್ಮಕ ಕಾರು ಬೇಕು ಎನ್ನುವುದಾದರೆ ನೀವು ಖರೀದಿಸಬಹುದು. ಈ ಓಡದ ಇಟ್ಟಿಗೆ ಕಾರಿನ ಬೆಲೆ ಮಾತ್ರ 80 ಸಾವಿರ ಪೌಂಡ್. ಅಂದರೆ ಭಾರತೀಯ ರೂಪಾಯಿ ಲೆಕ್ಕದಲ್ಲಿ ಸುಮಾರು 5.77 ಲಕ್ಷ! ಹೊಸ ಓಡುವ ಕಾರನ್ನೇ ಕೊಳ್ಳಬಹುದು ಅಂತೀರಾ.. ಇಟ್ಸ್ ಓಕೆ!

■ ಸುಭಾಸ ಯಾದವಾಡ